ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ Part – IVA	ಬೆಂಗಳೂರು, ಮಂಗಳವಾರ, ೧೨ ಆಗಸ್ಟ್, ೨೦೨೫ (ಶ್ರಾವಣ ೨೧, ಶಕವರ್ಷ ೧೯೪೭) BENGALURU, TUESDAY, 12 AUGUST, 2025 (SHRAVANA 21, SHAKAVARSHA 1947)	ನಂ. ೪೫೩ No. 453

ಕರ್ನಾಟಕ ವಿಧಾನಸಭೆ

ಹದಿನಾರನೇ ವಿಧಾನಸಭೆ

ಏಳನೇ ಅಧಿವೇಶನ

ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ವಿಧೇಯಕ, 2025

(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–29)

ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ಅಧಿನಿಯಮ, 2012ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ಅಧಿನಿಯಮ, 2012 (2015ರ ಕರ್ನಾಟಕ ಅಧಿನಿಯಮ 26)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು 2025ರ ಮೇ 27ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 3ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ಅಧಿನಿಯಮ, 2012 (2015ರ ಕರ್ನಾಟಕ ಅಧಿನಿಯಮ 26) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 3ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದ ಈಗಾಗಲೇ ಇರುವ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ಗ್ರಾಮೀಣ ಪ್ರದೇಶಗಳಲ್ಲಿನ ಖಾಲಿಸ್ಥಾನಗಳನ್ನು ಆದ್ಯತೆಯ ಮೇಲೆ ತುಂಬತಕ್ಕದ್ದು ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಖಾಲಿ ಹುದ್ದೆಗಳಿಗಿಂತ ಹೆಚ್ಚಿನ ಅಭ್ಯರ್ಥಿಗಳ ಸಂಖ್ಯೆಯಿರುವ ಸಂದರ್ಭದಲ್ಲಿ ನಗರ ಪ್ರದೇಶಗಳಲ್ಲಿನ ಖಾಲಿಸ್ಥಾನಗಳಿಗೆ ಒಂದು ವರ್ಷದ ಕಡ್ಡಾಯ ಸೇವೆ ಸಲ್ಲಿಸಲು ಅಭ್ಯರ್ಥಿಗಳನ್ನು ಸ್ಥಳನಿಯುಕ್ತಿಗೊಳಿಸುವ ಮೂಲಕ ತುಂಬಬಹುದು."

(ii) (3)ನೇ ಉಪಪ್ರಕರಣದಲ್ಲಿ "ಗ್ರಾಮೀಣ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(iii) (4)ನೇ ಉಪಪ್ರಕರಣದಲ್ಲಿ,-

(ಎ) "ಗ್ರಾಮೀಣ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(ಬಿ) ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು ಅಭ್ಯರ್ಥಿಗಳು ಉನ್ನತ ವಾಸಂಗವನ್ನು ಪೂರ್ಣಗೊಳಿಸಿದ ನಂತರ ಒಂದು ವರ್ಷದ ಕಡ್ಡಾಯ ಸೇವೆಯ ಹೊಣೆಗಾರಿಕೆಯನ್ನು ಪೂರೈಸುವ ಅವರ ಬದ್ಧತೆಯನ್ನು ನಮೂದಿಸಿ, ತಪ್ಪಿದಲ್ಲಿ ಆತನು ದಂಡನೆಗೆ ಮತ್ತು ಅಫಿಡವಿಟ್ ಅಥವಾ ಮುಚ್ಚಳಿಕೆಯಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ತತ್ಪರಿಣಾಮಗಳಿಗೆ ಹೊಣೆಯಾಗತಕ್ಕದ್ದು ಎಂದು ಮುಚ್ಚಳಿಕೆ ಅಥವಾ ಅಫಿಡವಿಟ್ಟನ್ನು ಸಲ್ಲಿಸಿದ ಮೇಲೆ, ಅವರಿಗೆ ಕಾನೂನು ರೀತ್ಯಾ ಸ್ಥಾಪಿಸಲಾದ ವಿಶ್ವವಿದ್ಯಾನಿಲಯಗಳಲ್ಲಿ ಎಂಡಿ ಅಥವಾ ಎಂಎಸ್ ಅಥವಾ ಫೆಲೋಷಿಪ್-ನಂತಹ ಉನ್ನತ ವ್ಯಾಸಂಗಗಳನ್ನು ಪಡೆಯಲು ಷರತ್ತುಬದ್ಧ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಬಹುದು."

3. 3ಎ ಹೊಸ ಪ್ರಕರಣದ ಸೇರ್ಪಡೆ.- ಮೂಲ ಅಧಿನಿಯಮದ 3ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**3ಎ. ಆದ್ಯತೆ ಮತ್ತು ವಿನಾಯಿತಿ.-** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, 3, 4 ಮತ್ತು 5ನೇ ಪ್ರಕರಣಗಳಡಿ ಸರ್ಕಾರಿ ಆಸ್ಪತ್ರೆಗಳಲ್ಲಿ ಕಡ್ಡಾಯ ಸೇವೆಗಾಗಿ ಸರ್ಕಾರವು ನಿರ್ದಿಷ್ಟಪಡಿಸಿದ ಅಸ್ತಿತ್ವದಲ್ಲಿರುವ ಖಾಲಿಸ್ಥಾನಗಳನ್ನು ತುಂಬುವಾಗ, ಸರ್ಕಾರಿ ಕೋಟಾ ಸೀಟುಗಳಡಿ ವೈದ್ಯಕೀಯ ಕೋರ್ಸು ಉತ್ತೀರ್ಣರಾದ ಅಭ್ಯರ್ಥಿಗಳನ್ನು ಆದ್ಯತೆಯ ಮೇಲೆ ತುಂಬತಕ್ಕದ್ದು ಹಾಗೂ ಉಳಿದ ಖಾಲಿಸ್ಥಾನಗಳನ್ನು ಸಾಂಸ್ಥಿಕ ಸೀಟುಗಳಡಿ ವೈದ್ಯಕೀಯ ಕೋರ್ಸುಗಳನ್ನು ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಂದ ತುಂಬಬಹುದು ಮತ್ತು ಹೆಚ್ಚುವರಿ ಅಭ್ಯರ್ಥಿಗಳನ್ನು ಕಡ್ಡಾಯ ಸೇವೆಯಿಂದ ವಿನಾಯಿತಿಗೊಳಿಸಬಹುದು.

ವಿವರಣೆ: ಈ ಪ್ರಕರಣದ ಉದ್ದೇಶಕ್ಕಾಗಿ "ಸರ್ಕಾರಿ ಸೀಟುಗಳು" ಮತ್ತು "ಸಾಂಸ್ಥಿಕ ಸೀಟುಗಳು" ಎಂಬುದು ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿರ್ಧರಣೆ) ಅಧಿನಿಯಮ, 2006 (2006ರ ಕರ್ನಾಟಕ ಅಧಿನಿಯಮ 8)ರಲ್ಲಿ ಪರಿಭಾಷಿಸಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು."

4. 4ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 4ನೇ ಪ್ರಕರಣದ, (1)ನೇ ಉಪ-ಪ್ರಕರಣದಲ್ಲಿ,-

(i) "ಗ್ರಾಮೀಣ" ಎಂಬ ಪದವನ್ನು ಹಾಗೂ "ನಗರ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ii) ಈ ಮುಂದಿನ ಪರಂತುಕವನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು ಅಭ್ಯರ್ಥಿಗಳು ಉನ್ನತ ವಾಸಂಗವನ್ನು ಪೂರ್ಣಗೊಳಿಸಿದ ನಂತರ ಒಂದು ವರ್ಷದ ಕಡ್ಡಾಯ ಸೇವೆಯ ಹೊಣೆಗಾರಿಕೆಯನ್ನು ಪೂರೈಸುವ ಅವರ ಬದ್ಧತೆಯನ್ನು ನಮೂದಿಸಿ, ತಪ್ಪಿದಲ್ಲಿ ಆತನು ದಂಡನೆಗೆ ಮತ್ತು ಅಫಿಡವಿಟ್ ಅಥವಾ ಮುಚ್ಚಳಿಕೆಯಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ತತ್ಪರಿಣಾಮಗಳಿಗೆ ಹೊಣೆಯಾಗತಕ್ಕದ್ದು ಎಂದು ಮುಚ್ಚಳಿಕೆ ಅಥವಾ ಅಫಿಡವಿಟ್ಟನ್ನು ಸಲ್ಲಿಸಿದ ಮೇಲೆ, ಅವರಿಗೆ ಕಾನೂನು ರೀತ್ಯಾ ಸ್ಥಾಪಿಸಲಾದ

ವಿಶ್ವವಿದ್ಯಾನಿಲಯಗಳಲ್ಲಿ ಸೂಪರ್ ಸ್ಪೆಷಾಲಿಟಿ ಅಥವಾ ಫೆಲೋಷಿಪ್-ನಂತಹ ಉನ್ನತ ವ್ಯಾಸಂಗಗಳನ್ನು ಪಡೆಯಲು ಷರತ್ತುಬದ್ಧ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಬಹುದು."

5. 5ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 5ನೇ ಪ್ರಕರಣದಲ್ಲಿನ (2)ನೇ ಉಪ-ಪ್ರಕರಣದಲ್ಲಿ,-

(ಎ) ಪರಂತುಕದಲ್ಲಿ "ಗ್ರಾಮೀಣ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು.

(ಬಿ) ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು ಅಭ್ಯರ್ಥಿಗಳು ಉನ್ನತ ವಾಸಂಗವನ್ನು ಪೂರ್ಣಗೊಳಿಸಿದ ನಂತರ ಒಂದು ವರ್ಷದ ಕಡ್ಡಾಯ ಸೇವೆಯ ಹೊಣೆಗಾರಿಕೆಯನ್ನು ಪೂರೈಸುವ ಅವರ ಬದ್ಧತೆಯನ್ನು ನಮೂದಿಸಿ, ತಪ್ಪಿದಲ್ಲಿ ಆತನು ದಂಡನೆಗೆ ಮತ್ತು ಅಫಿಡವಿಟ್ ಅಥವಾ ಮುಚ್ಚಳಿಕೆಯಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ತತ್ಪರಿಣಾಮಗಳಿಗೆ ಹೊಣೆಯಾಗತಕ್ಕದ್ದು ಎಂದು ಮುಚ್ಚಳಿಕೆ ಅಥವಾ ಅಫಿಡವಿಟ್ಟನ್ನು ಸಲ್ಲಿಸಿದ ಮೇಲೆ, ಅವರಿಗೆ ಕಾನೂನು ರೀತ್ಯಾ ಸ್ಥಾಪಿಸಲಾದ ವಿಶ್ವವಿದ್ಯಾನಿಲಯಗಳಲ್ಲಿ ಫೆಲೋಷಿಪ್-ನಂತಹ ಉನ್ನತ ವ್ಯಾಸಂಗಗಳನ್ನು ಪಡೆಯಲು ಷರತ್ತುಬದ್ಧ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಬಹುದು."

6. 5ಎ ಹೊಸ ಪ್ರಕರಣದ ಸೇರ್ಪಡೆ.- ಮೂಲ ಅಧಿನಿಯಮದ 5ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

> **"5ಎ. ಅಪೀಲು.-** ಈ ಅಧಿನಿಯಮದ ಉಪಬಂಧಗಳಡಿ ಸಕ್ಷಮ ಪ್ರಾಧಿಕಾರದ ಆದೇಶಗಳ ಮೂಲಕ ಬಾಧಿತನಾದ ಯಾರೇ ವ್ಯಕ್ತಿಯು, ಸರ್ಕಾರವು ಅಧಿಸೂಚಿಸಿದಂತೆ ನಿರ್ದಿಷ್ಟಪಡಿಸಿದ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು ಮತ್ತು ನಿರ್ದಿಷ್ಟಪಡಿಸಿದ ಪ್ರಾಧಿಕಾರವು ನಿಯಮಿಸಬಹುದಾದ ರೀತಿಯಲ್ಲಿ ಅದನ್ನು ವಿಲೇವಾರಿ ಮಾಡಬಹುದು."

7. ನಿರಸನ ಮತ್ತು ಉಳಿಸುವಿಕೆಗಳು.- (1) ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ಅಧ್ಯಾದೇಶ, 2025 (2025ರ ಕರ್ನಾಟಕ ಅಧ್ಯಾದೇಶ ಸಂ. 06)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ತೆಗೆದುಕೊಂಡ ಯಾವುದೇ ಕ್ರಮವನ್ನು**,** ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಅದನ್ನು ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು**.**

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ಅಧಿನಿಯಮ, 2012 (2015ರ ಕರ್ನಾಟಕ ಅಧಿನಿಯಮ 26)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(1) ಗ್ರಾಮೀಣ ಪ್ರದೇಶಗಳಿಗೆ ಸ್ಥಳನಿಯುಕ್ತಿ ಮಾಡಿದ ನಂತರವೂ ಹೆಚ್ಚುವರಿ ಉಳಿಯುವ ಎಂಬಿಬಿಎಸ್ ಪದವೀಧರರನ್ನು ನಗರ ಪ್ರದೇಶಗಳಲ್ಲಿಯೂ ಸ್ಥಳನಿಯುಕ್ತಿಗೊಳಿಸುವುದು;

(2) ಗ್ರಾಮೀಣ ಪ್ರದೇಶಗಳಲ್ಲಿನ ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಇತರ ಆಸ್ಪತ್ರೆಗಳಿಗೆ ಸ್ನಾತಕೋತ್ತರ ಪದವೀಧರರನ್ನು ಸ್ಥಳನಿಯುಕ್ತಿಗೊಳಿಸುವುದು;

(3) ಒಂದು ವರ್ಷದ ಕಡ್ಡಾಯ ಸೇವೆಯ ಹೊಣೆಗಾರಿಕೆಯನ್ನು ಪೂರೈಸುವ ಅವರ ಬದ್ಧತೆಯನ್ನು ನಮೂದಿಸಿ, ತಪ್ಪಿದಲ್ಲಿ ಆತನು ದಂಡಕ್ಕೆ ಮತ್ತು ಒಪ್ಪಿಕೊಂಡಂಥ ಇತರ ತತ್ಪರಿಣಾಮಗಳಿಗೆ ಒಳಪಡುವ ಮುಚ್ಚಳಿಕೆಯನ್ನು ಸಲ್ಲಿಸಿದ ಮೇಲೆ ಉನ್ನತ ವ್ಯಾಸಂಗಗಳಾದ

ಸ್ನಾತಕೋತ್ತರ ಮತ್ತು ಸೂಪರ್ ಸ್ಪೆಷಾಲಿಟಿ ಕೋರ್ಸ್‌ಗಳನ್ನು ಪಡೆಯಲು ಷರತ್ತುಬದ್ಧ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡುವುದು; ಮತ್ತು

(4) ಕೆಲವು ಇತರ ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡುವುದು.

(5) ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ಅಧ್ಯಾದೇಶ, 2025ನ್ನು (2025ರ ಕರ್ನಾಟಕ ಅಧ್ಯಾದೇಶ 06) ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ ಪತ್ರ

ಖಂಡ 6 :	ನಿಯಮಿಸಿದ ಪ್ರಾಧಿಕಾರದ ಮೂಲಕ ಅಪೀಲು ವಿಲೇವಾರಿ ಮಾಡುವಂಥ ವಿಧಾನವನ್ನು ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ದಿನೇಶ್ ಗುಂಡೂರಾವ್
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿ

ಎಂ.ಕೆ. ವಿಶಾಲಾಕ್ಷಿ
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆಗಳ 80ನೇ ನಿಯಮದ (1)ನೇ ಉಪನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ.

ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ಅಧಿನಿಯಮ, 2012 (2015ರ ಕರ್ನಾಟಕ ಅಧಿನಿಯಮ 26)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(1) ಗ್ರಾಮೀಣ ಪ್ರದೇಶಗಳಿಗೆ ಸ್ಥಳನಿಯುಕ್ತಿ ಮಾಡಿದ ನಂತರವೂ ಹೆಚ್ಚುವರಿ ಉಳಿಯುವ ಎಂಬಿಬಿಎಸ್ ಪದವೀಧರರನ್ನು ನಗರ ಪ್ರದೇಶಗಳಲ್ಲಿಯೂ ಸ್ಥಳನಿಯುಕ್ತಿಗೊಳಿಸುವುದು;

(2) ಗ್ರಾಮೀಣ ಪ್ರದೇಶಗಳಲ್ಲಿನ ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಇತರ ಆಸ್ಪತ್ರೆಗಳಿಗೆ ಸ್ನಾತಕೋತ್ತರ ಪದವೀಧರರನ್ನು ಸ್ಥಳನಿಯುಕ್ತಿಗೊಳಿಸುವುದು;

(3) ಒಂದು ವರ್ಷದ ಕಡ್ಡಾಯ ಸೇವೆಯ ಹೊಣೆಗಾರಿಕೆಯನ್ನು ಪೂರೈಸುವ ಅವರ ಬದ್ಧತೆಯನ್ನು ನಮೂದಿಸಿ, ತಪ್ಪಿದಲ್ಲಿ ಆತನು ದಂಡಕ್ಕೆ ಮತ್ತು ಒಪ್ಪಿಕೊಂಡಂಥ ಇತರ ತತ್ಪರಿಣಾಮಗಳಿಗೆ ಒಳಪಡುವ ಮುಚ್ಚಳಿಕೆಯನ್ನು ಸಲ್ಲಿಸಿದ ಮೇಲೆ ಉನ್ನತ ವ್ಯಾಸಂಗಗಳಾದ ಸ್ನಾತಕೋತ್ತರ ಮತ್ತು ಸೂಪರ್ ಸ್ಪೆಷಾಲಿಟಿ ಕೋರ್ಸ್‌ಗಳನ್ನು ಪಡೆಯಲು ಷರತ್ತುಬದ್ಧ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡುವುದು; ಮತ್ತು

(4) ಕೆಲವು ಇತರ ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ಅಧ್ಯಾದೇಶ, 2025ನ್ನು (2025ರ ಕರ್ನಾಟಕ ಅಧ್ಯಾದೇಶ 06) ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಅನುಬಂಧ
ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ಅಧಿನಿಯಮ, 2012 ರ (2015ರ ಕರ್ನಾಟಕ ಅಧಿನಿಯಮ 26) ಉದ್ಧೃತ ಭಾಗ

XXX XXX XXX

2. ಪರಿಭಾಷೆಗಳು.-

XXX XXX XXX

3. ವೈದ್ಯಕೀಯ ಕೋರ್ಸನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವೆ.- (1) ಎಂಬಿಬಿಎಸ್ ಪದವಿ ಕೋರ್ಸನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಮತ್ತು ಒಂದು ವರ್ಷದ ಇಂರ್ನ್ಶಿಪ್ ಪೂರ್ಣಗೊಳಿಸಿದ ತರುವಾಯ ಪ್ರತಿಯೊಬ್ಬ ಅಭ್ಯರ್ಥಿಯು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಕೌನ್ಸಿಲಿಂಗ್‌ನ ಪ್ರಕ್ರಿಯೆಯ ಮೂಲಕ ಮೆರಿಟ್ ಆಧಾರದ ಮೇಲೆ ಹಂಚಿಕೆಯಾದ ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಅಥವಾ

ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷದ ಕಡ್ಡಾಯ ಗ್ರಾಮೀಣ ಸೇವೆಗೆ ಒಳಪಡತಕ್ಕದ್ದು. ಅಂಥ ಸೇವಾ ಅವಧಿಯಲ್ಲಿ ಆತನನ್ನು ಕಿರಿಯ ನಿವಾಸಿ (ಜೂನಿಯರ್ ರೆಸಿಡೆಂಟ್) ಎಂದು ಕರೆಯತಕ್ಕದ್ದು.

ಪರಂತು, ಅಭ್ಯರ್ಥಿಗಳು ಕೇಂದ್ರ ಅಥವಾ ರಾಜ್ಯ ಸರ್ಕಾರದ ನಿಯತ ಸೇವೆಗಾಗಿ ಆಯ್ಕೆಯಾದರೆ, ಅಂಥ ಅಭ್ಯರ್ಥಿಗಳನ್ನು ವಿನಾಯಿತಿಸತಕ್ಕದ್ದು.

(2) **XXX XXX XXX**

(3) ಒಂದು ವರ್ಷದ ಕಡ್ಡಾಯ ಗ್ರಾಮೀಣ ಸೇವೆಗೆ ಒಳಪಟ್ಟ ಪ್ರತಿಯೊಬ್ಬ ಅಭ್ಯರ್ಥಿಗೆ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿದಂತೆ ಅಂಥ ವೃತಿ ವೇತನವನ್ನು (ಸ್ಟೈಫಂಡ್) ಸಂದಾಯ ಮಾಡತಕ್ಕದ್ದು.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪ ಪ್ರಕರಣದಲ್ಲಿ ಕಡ್ಡಾಯ ಗ್ರಾಮೀಣ ಸೇವೆಗೆ ಒಳಪಡದಿರುವಂಥ ಅಥವಾ ಕೆಲಸ ಮಾಡಲು ನಿರಾಕರಿಸುವ ಅಥವಾ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳನ್ನು ಪಾಲಿಸದಿರುವ ಪ್ರತಿಯೊಬ್ಬ ಅಭ್ಯರ್ಥಿಯು, ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ರಡಿಯಲ್ಲಿ ಅಥವಾ ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 ರಡಿಯಲ್ಲಿ ರಾಜ್ಯದಲ್ಲಿ ಶಾಶ್ವತ ನೋಂದಣಿಗೆ ಅರ್ಹರಾಗಿರತಕ್ಕದ್ದಲ್ಲ:

ಪರಂತು, ಅಂಥ ಅಭ್ಯರ್ಥಿಗಳಿಗೆ, ಸೇವೆಯ ಅವಧಿಯಲ್ಲಿ ರೋಗಿಗಳಿಗೆ ಸ್ವತಂತ್ರವಾಗಿ ಚಿಕಿತ್ಸೆ ನೀಡಲು ಮತ್ತು ಔಷಧಿಗಳನ್ನು ನಿಯಮಿಸಲು ಸದರಿ ಸೇವೆಗೆ ಒಳಪಡುವವರೆಗೆ, ತಾತ್ಕಾಲಿಕ ನೋಂದಣಿಯನ್ನು ನೀಡಬಹುದಾಗಿದೆ.

XXX XXX XXX

4. ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವೆ.- (1) 3ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಕಡ್ಡಾಯ ಗ್ರಾಮೀಣ ಸೇವೆಗೆ ಒಳಪಡಿಸಿದ ಅಭ್ಯರ್ಥಿಗಳನ್ನು ಹೊರತುಪಡಿಸಿ, ಸ್ನಾತಕೋತ್ತರ ಡಿಪ್ಲೋಮೊ ಅಥವಾ ಪದವಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದಂಥ ಪ್ರತಿಯೊಬ್ಬ ಅಭ್ಯರ್ಥಿಯು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ರಾಜ್ಯದಲ್ಲಿ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ಮೆರಿಟ್ ಆಧಾರದ ಮೇಲೆ ಆಯ್ಕೆಯಾದ ಮತ್ತು ಸ್ಥಳ ನಿಯುಕ್ತಿಯಾದ ನಗರ ಪ್ರದೇಶದಲ್ಲಿ ಇರುವ ಸರ್ಕಾರಿ ಆಸ್ಪತ್ರೆಗಳಲ್ಲಿ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಲಾದಂತೆ ಅಸ್ತಿತ್ವದಲ್ಲಿರುವ ಖಾಲಿಹುದ್ದೆಗಳಲ್ಲಿ ಒಂದು ವರ್ಷದ ಕಡ್ಡಾಯ ಸೇವೆಗೆ ಒಳಪಡತಕ್ಕದ್ದು. ಅಂಥ ಸೇವಾ ಅವಧಿಯಲ್ಲಿ ಆತನನ್ನು ಹಿರಿಯ ನಿವಾಸಿ (ಸೀನಿಯರ್ ರೆಸಿಡೆಂಟ್) ಎಂದು ಕರೆಯತಕ್ಕದ್ದು. ಆತನು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿದಂತೆ ಅಂಥ ವೃತ್ತಿ ವೇತನಕ್ಕೆ ಅರ್ಹನಾಗಿರತಕ್ಕದ್ದು.

(2) 3ನೇ ಪ್ರಕರಣದ (4)ನೇ ಉಪ-ಪ್ರಕರಣದಲ್ಲಿನ ಉಪಬಂಧಗಳು, ಈ ಪ್ರಕರಣದ ಅಡಿಯಲ್ಲಿ ಸ್ನಾತಕೋತ್ತರ ಪದವೀಧರರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು:

ಪರಂತು, ರೋಗಿಗಳಿಗೆ ಸ್ವತಂತ್ರವಾಗಿ ಚಿಕಿತ್ಸೆ ನೀಡಲು ಮತ್ತು ಔಷಧವನ್ನು ಸೂಚಿಸಲು ಕಡ್ಡಾಯ ಗ್ರಾಮೀಣ ಸೇವೆಗೆ ಒಳಗಾಗುವ ಅಂಥ ಅಭ್ಯರ್ಥಿಗಳಿಗೆ, ಅಂಥ ಸೇವೆಯು ಪೂರ್ಣಗೊಳ್ಳುವವರೆಗೆ ತಾತ್ಕಾಲಿಕ ನೋಂದಣಿಯನ್ನು ನೀಡಬಹುದು;

XXX XXX XXX

5. ಸೂಪರ್‌ಸ್ಪೆಷಾಲಿಟಿ ಪದವಿ ಕೋರ್ಸು ಪೂರ್ಣಗೊಳಿಸಿದ ಅಭ್ಯರ್ಥಿಯ ಕಡ್ಡಾಯ ಸೇವೆ.- (1)

XXX XXX XXX

(2) 3ನೇ ಪ್ರಕರಣದ (4)ನೇ ಉಪಪ್ರಕರಣದ ಉಪಬಂಧಗಳು ಸೂಪರ್ ಸ್ಪೆಷಾಲಿಟಿ ಕೋರ್ಸುಗಳನ್ನು ತೇರ್ಗಡೆಯಾಗುವ ಅಭ್ಯರ್ಥಿಗಳಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು;

ಪರಂತು, ರೋಗಿಗಳಿಗೆ ಸ್ವತಂತ್ರವಾಗಿ ಚಿಕಿತ್ಸೆ ನೀಡಲು ಮತ್ತು ಔಷಧವನ್ನು ಸೂಚಿಸಲು ಕಡ್ಡಾಯ ಗ್ರಾಮೀಣ ಸೇವೆಗೆ ಒಳಗಾಗುವ ಅಂಥ ಅಭ್ಯರ್ಥಿಗಳಿಗೆ ಅಂಥ ಸೇವೆಯು ಪೂರ್ಣಗೊಳ್ಳುವವರೆಗೆ ತಾತ್ಕಾಲಿಕ ನೋಂದಣಿಯನ್ನು ನೀಡಬಹುದು.

XXX XXX XXX

KARNATAKA LEGISLATIVE ASSEMBLY

SIXTEENTH LEGISLATIVE ASSEMBLY

SEVENTH SESSION

THE KARNATAKA COMPULSORY SERVICE BY CANDIDATES COMPLETED MEDICAL COURSES (AMENDMENT) BILL, 2025

(LA Bill No. 29 of 2025)

A Bill further to amend the Karnataka Compulsory Service by Candidates Completed Medical Courses Act, 2012.

Whereas it is expedient to amend the Karnataka Compulsory Service by Candidates Completed Medical Courses Act, 2012 (Karnataka Act 26 of 2015) for the purposes hereinafter appearing;

Be it enacted by the Karnataka State Legislature in the seventy sixth year of the Republic of India, as follows:-

1. Short title and commencement.-(1) This Act may be called the Karnataka Compulsory Service by Candidates Completed Medical Courses (Amendment) Act, 2025.

(2) It shall be deemed to have come into force with effect from the 27th day of May, 2025.

2. Amendment of section 3.- In section 3 of the Karnataka Compulsory Service by Candidates Completed Medical Courses Act, 2012 (Karnataka Act 26 of 2015) (hereinafter referred to as the principal Act),-

(i) in sub-section (1), the following proviso shall be inserted, namely:-

"Provided further that, the vacancies in the rural areas shall be filled on priority and in case the number of candidates are more than the vacancies in rural areas then the vacancies in urban areas may be filled by posting of candidates to render one year compulsory service."

(ii) in sub-section (3), the word 'rural' shall be omitted;

(iii) in sub-section (4),-

(a) the word 'rural' shall be omitted;

(b) after the proviso, the following proviso shall be inserted, namely:-

"Provided further that, candidates may be given a conditional No Objection Certificate to pursue higher studies like MD or MS or Fellowship in the universities established by law upon submitting an affidavit undertaking stating their commitment to fulfill the obligation of one year compulsory service post-completion of higher studies failing which he shall be liable for penalty and such other consequences specified in the affidavit or undertaking."

3. Insertion of new section 3-A.- In the Principal Act after section 3, the following shall be inserted, namely:-

"**3-A. Priority and exemption.-** Notwithstanding anything contained in this Act, while filling up of existing vacancies specified by the Government for compulsory service in the Government hospitals under sections 3,4 and 5 the candidates who have passed medical courses under Government quota seats shall be filled on priority and the remaining vacancies may be filled by the candidates who have studied medical courses under institutional seats and the surplus candidates may be exempted from the compulsory service.

Explanation: For the purpose of this section "Government seats" and the "Institutional seats" shall have the same meaning as defined in the Karnataka Professional Educational Institutions (Regulation of Admission and Determination of Fee) Act, 2006 (Karnataka Act 8 of 2006)."

4. Amendment of section 4.- In section 4 of the Principal Act in sub-section (1),-

(i) the word 'rural' and the word 'urban' shall be omitted; and

(ii) the following proviso shall be inserted at the end, namely:-

"Provided that, candidates may be given a conditional No Objection Certificate to pursue higher studies like Super-specialty or Fellowship in the universities established by law upon submitting an affidavit or undertaking stating their commitment to fulfill the obligation of one year compulsory service post-completion of the higher studies failing which he shall be liable for penalty and such other consequences specified in the affidavit or undertaking."

5. Amendment of section 5.- In section 5 of the principal Act, in sub-section (2),-

(a) in the proviso, the word "rural", shall be omitted; and

(b) after the proviso, the following proviso shall be inserted, namely:-

"Provided further that, candidates may be given a conditional No Objection Certificate to pursue higher studies like fellowship in the universities established by law upon submitting an affidavit or undertaking stating their commitment to fulfill the obligation of one year compulsory service post-completion of the higher studies failing which he shall be liable for penalty and such other consequences specified in the affidavit or undertaking."

6. Insertion of new section 5A.- After section 5 of the Principal Act, the following shall be inserted, namely:-

"5A. Appeal.- Any person aggrieved by the orders of the competent authority under the provisions of this Act may make an appeal to the Specified Authority as notified by the Government and the Speicified Authority may dispose it off in such manner as may be prescribed."

7. Repeal and savings.- (1) The Karnataka Compulsory Service by Candidates Completed Medical Courses Ordinance, 2025 (Karnataka Ordinance 06 of 2025) is here by repealed.

(2) Notwithstanding such repeal anything done or any action taken under principal Act as amended by the said Ordinance shall be deemed to have been done or taken under the principal Act as amended by this Act.

STATEMENT OF OBJECTS AND REASONS

It is considered necessary to amend the Karnataka Compulsory Service by Candidates Completed medical Courses Act, 2012 (Karnataka Act 26 of 2015) to provide for,-

(1) posting of MBBS Graduates even in urban areas who remains surplus even after posting to rural areas;

(2) posting of post Graduates to community health Centres and other hospitals in rural areas also;

(3) issuing conditional, No Objection certificate to pursue higher studies like PG and Super Specialty courses upon submitting an undertaking to fulfill the obligation of one year Compulsory Service, failing which he shall be liable for penalty and such other consequences as agreed upon; and

(4) certain other consequential amendments are also made.

(5) As the matter was urgent and the Karnataka legislative Assembly and the Karnataka Legislative Council were not in session, the Karnataka Compulsory Services by Candidates competed Medical Courses Ordinance, 2025 (Karnataka Ordinance 06 of 2025) was promulgated to achieve the above object.

This Bill seeks to replace the said Ordinance.

Hence, the Bill

FINANCIAL MEMORANDUM

There is no extra Expenditure involved in the Proposed Legislative measure.

MEMORANDUM REGARDING DELEGATED LEGISLATION

Clause 6:	empowers the State Government to prescribe by rules such manner to dispose the appeal by the prescribed authority

The proposed delegation of legislative power is normal in character.

Dinesh Gundu Rao
Minister of Health and
Family Welfare Department

M.K. VISHALAKSHI
Secretary
Karnataka Legislative Assembly

EXPLANATORY STATEMENT AS REQUIRED BY SUB-RULE (1) OF RULE 80 OF THE RULES OF PROCEDURE AND CONDUCT OF BUSINESS IN THE KARNATAKA LEGISLATIVE ASSEMBLY.

It is considered necessary to amend the Karnataka Compulsory Service by Candidates Completed medical Courses Act, 2012 (Karnataka Act 26 of 2015) to provide for,-

(1) posting of MBBS Graduates even in urban areas who remains surplus even after posting to rural areas;

(2) posting of post Graduates to community health Centres and other hospitals in rural areas also;

(3) issuing conditional, No Objection certificate to pursue higher studies like PG and Super Specialty courses upon submitting an undertaking to fulfill the obligation of one year Compulsory Service, failing which he shall be liable for penalty and such other consequences as agreed upon; and

(4) certain other consequential amendments are also made.

As the matter was urgent and the Karnataka legislative Assembly and the Karnataka Legislative Council were not in session, the Karnataka Compulsory Services by Candidates competed Medical Courses Ordinance, 2025 (Karnataka Ordinance 06 of 2025) was promulgated to achieve the above object.

This Bill seeks to replace the said Ordinance.

ANNEXURE

THE EXTRACT OF THE KARNATAKA COMPULSORY SERVICE BY CANDIDATES COMPLETED MEDICAL COURSES ACT, 2012 (KARNATAKA ACT 26 OF 2015)

XXX XXX XXX

2. Definitions.-

XXX XXX XXX

3. Compulsory service of candidates completed medical course.- (1) Every candidate after successful completion of MBBS degree and after completion of one year internship course shall undergo one year compulsory rural service in the existing vacancies as specified by the State Government in Government Primary

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

Health Centres or Government Hospitals in rural areas allotted on the basis of merit through process of counseling in such manner as may be prescribed. During such service he shall be called as Junior Resident.

Provided that, if candidates are selected for regular Central or State Government service, such candidates shall be exempted.

(2) **XXX XXX XXX**

(3) Every candidate who undergoes compulsory rural service of one year shall be paid such a stipend as specified by the State Government.

(4) Notwithstanding anything contained in any law for the time being force every candidate who does not undergo the compulsory rural service or refuse to work or non compliance of the conditions as may be specified by the State Government under sub-section (1) shall also not be eligible to permanent registration under the State under Karnataka Medical Registration Act, 1961 or under the India Medical Council Act, 1956:

Provided that such candidates may be given a temporary registration during till he undergo the said service independently treat patients and prescribe medicine during the service period.

XXX XXX XXX

4. Compulsory service of candidates completed post graduate Medical courses.-(1) Every candidate other than the candidate who has undergone compulsory rural service under sub-section (1) of section 3 and who has successfully completed post graduate diploma or degree shall undergo one year compulsory service in the existing vacancies as specified by the State Government in Government hospital in urban area selected and posted on the basis of merit through process of counseling in the State in such manner as may be prescribed. During such service he shall be called as senior resident He shall be eligible for such a stipend as specified by the State Government.

Provided that, if candidates are selected for regular Central or State Government service, after post-graduation, such candidates shall be exempted.

XXX XXX XXX

5. Compulsory service of candidates completed super specialty graduate courses.- (1) **XXX XXX XXX**

(2) the provisions of sub-section (4) of section 3 shall mutatis mutandies apply to candidates who passes super specialty courses:

Provided that, such candidates who undergo compulsory rural service may be given temporary registration till completion of such service to treat patients independently and prescribe medicine.

XXX XXX XXX

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH